ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/04/ಇಸಿಎಸ್(1)/2021

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:05-10-2021

## ಜ್ಞಾಪನ

ವಿಷಯ: COVID-19 Pandemic ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಡಿಪ್ಲೋಮ 02/04ನೆ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಥಿಯರಿ ವಿಷಯಗಳಿಗೆ ನಿಗದಿಪಡಿಸಿರುವ ಅಂಕಗಳನ್ನು ಮತ್ತು ಎಲ್ಲಾ ಸೆಮಿಸ್ಟರ್‌ಗಳ ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳ ಆಂತರಿಕಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು.

ಉಲ್ಲೇಖ:1) ಆಯುಕ್ತರ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ:ಬಿಟಿಇ/04/ಇಸಿಎಸ್(1)/2021 ದಿನಾಂಕ: 01/10/2021
2) ತಾಂತ್ರಿಕ ಪರೀಕ್ಷಾ ಮಂಡಳಿಯ ದಿ:04-02-2013 ರಂದು ನಡೆದ 153ನೇ ಕೇಂದ್ರೀಯ ಸಭೆಯ ನಿರ್ಣಯ153.2.11
3) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, COVID-19 Pandemic ಹಿನ್ನೆಲೆಯಲ್ಲಿ 2020-21 ನೇ ಸಾಲಿನಲ್ಲಿ ಡಿಪ್ಲೋಮ 02 ಮತ್ತು 04ನೇ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ಹಾಗೂ ಸಂಜೆ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ 01 ಮತ್ತು 03 ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನೊಳಗೊಂಡಂತೆ) ಮಾತ್ರ 02 ಮತ್ತು 04ನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸದೆ ಥಿಯರಿ ವಿಷಯಗಳಿಗೆ ಗರಿಷ್ಠ 100ಕ್ಕೆ (ಸಂಬಂಧಪಟ್ಟ ಪಠ್ಯಕ್ರಮದ Scheme of Study ಯಲ್ಲಿನ ಗರಿಷ್ಠ ಅಂಕಗಳಿಗೆ) ಅಂಕಗಳನ್ನು ನಿಗದಿಪಡಿಸಲು ಪಾಲಿಸಬೇಕಾದ ನಿಯಮಗಳನ್ನು ರೂಪಿಸಿ ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿ ತಿಳಿಸಿ ವಿವರವಾದ ಸ್ಪಷ್ಟೀಕರಣಗಳನ್ನು ಮತ್ತು ನಮೂನೆಗಳನ್ನು ನೀಡಲಾಗಿದ್ದು ಯಾವುದೇ ರೀತಿಯ ಗೊಂದಲಕ್ಕೆ ಆಸ್ಪದ ನೀಡದಂತೆ ಅಂಕಗಳನ್ನು ನಿಗದಿಪಡಿಸಿ ಅನುಬಂಧ-1 ರಲ್ಲಿ ನಿಖರವಾಗಿ ನಮೂದಿಸಿ ದಿನಾಂಕ:11/10/2021ರೊಳಗೆ ವಿಭಾಗಾವಾರು ಲೆಡ್ಜರ್‌ಗಳನ್ನು ಸಿದ್ಧಪಡಿಸಿಕೊಂಡು ಸುಪರ್ದುಗೊಳಿಸಲು ತಿಳಿಸಲಾಗಿದೆ.

ಮುಂದುವರೆದು ಸಿದ್ಧಪಡಿಸಲಾದ ಅಂಕಗಳ ಲೆಡ್ಜರ್‌ಗಳಲ್ಲಿ ನಿಗದಿಪಡಿಸಿ ನಮೂದಿಸಲಾದ ಅಂಕಗಳನ್ನು ಮತ್ತು 2020-21ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬಾಹ್ಯ ಪಾಲಿಟೆಕ್ನಿಕ್ ಸಂಸ್ಥೆಯಿಂದ ತಮ್ಮ ಪಾಲಿಟೆಕ್ನಿಕ್‌ಗೆ ನಿಯೋಜಿಸಲ್ಪಟ್ಟ ಇಬ್ಬರು ಪರಿವೀಕ್ಷಕರುಗಳು ಪರಿಶೀಲಿಸುವರು.

COVID-19 Pandemic ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ನಡೆಸದೆ ಥಿಯರಿ ವಿಷಯಗಳಲ್ಲಿ ನಿಗದಿಪಡಿಸಲಾದ ಅಂಕಗಳನ್ನು ಮತ್ತು ಆಂತರಿಕ ಅಂಕಗಳನ್ನು ಪರಿಶೀಲಿಸುವ ಪರಿವೀಕ್ಷಕರ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ (ಸರ್ಕಾರಿ ಸಂಸ್ಥೆಗಳಿಗೂ ಸಹಿತ) ಪ್ರಕಟಿಸಲಾಗುವುದು. **<u>ದಿನಾಂಕ: 16-10-2021 ರಿಂದ 10-11-2021 ಅವಧಿಯಲ್ಲಿ</u>** ತಮ್ಮ ಸಂಸ್ಥೆಗೆ ಭೇಟಿ ನೀಡುವ ಸದರಿ ಪರಿವೀಕ್ಷಕರುಗಳಿಗೆ ತಾವು ಸಿದ್ಧಪಡಿಸಿರುವ ವಿಭಾಗವಾರು ಆರ್.ಆರ್.ನಂಬರ್‌ಗಳುಳ್ಳ ಅಂಕಗಳ ಲೆಡ್ಜರ್‌ಗಳು ಮತ್ತು ನಿಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ ನೀಲಿ ಪುಸ್ತಕ (Blue Book) ಗಳು, ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ನಮೂನೆಗಳಲ್ಲಿ ಒದಗಿಸುವುದು. ಪರಿಶೀಲಿಸಲ್ಪಟ್ಟ ಲೆಡ್ಜರ್‌ಗಳಲ್ಲಿನ ಅಂಕಗಳನ್ನು ಮತ್ತು ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ BTELinx ವೆಬ್ ಪೋರ್ಟಲ್ ಮೂಲಕ ಕಡ್ಡಾಯವಾಗಿ ಪರಿವೀಕ್ಷಕರ ಸಮ್ಮುಖದಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಥಿಯರಿ ವಿಷಯಗಳಿಗೆ ಗರಿಷ್ಠ 100 ಅಂಕಗಳಿಗೆ (ಅನ್ವಯಿಸುವ Scheme of Study ಪ್ರಕಾರ, ಉದಾ C-20, SEE,-50 ಅಂಕಗಳು ) ಉಲ್ಲೇಖ (1) ರ ಮಾನದಂಡಗಳ ಅನ್ವಯ ನಿಗದಿಪಡಿಸಲಾದ ಅಂಕಗಳನ್ನು ಮತ್ತು ಆಂತರಿಕ ಅಂಕಗಳನ್ನು ಪ್ರತಿ ಕೋರ್ಸಿನ ಡಿಕ್ಷನರಿಯಂತೆ ಯಶಸ್ವಿಯಾಗಿ BTELinx ನಲ್ಲಿ ಅಪ್ ಲೋಡ್ ಮಾಡಿದ ತಕ್ಷಣ BTELinx ವೆಬ್‌ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಅಂಕಗಳ ಲೆಡ್ಜರ್ ಮತ್ತು ಆಂತರಿಕ ಅಂಕಗಳ ರಿಜಿಸ್ಟರ್‌ನೊಡನೆ ಮತ್ತೊಮ್ಮೆ ತಾಳೆ ಮಾಡಿ ಪರಿವೀಕ್ಷಕರು, ವಿಭಾಗಾಧಿಕಾರಿಗಳು ಹಾಗೂ ಪ್ರಾಚಾರ್ಯರು ಪ್ರತಿ ಪುಟದಲ್ಲಿ ಸಹಿ ಮಾಡುವುದು. ಆಂತರಿಕ ಅಂಕಗಳನ್ನು ಮಾತ್ರ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು. **ಯಾವುದೇ ಕಾರಣಕ್ಕೂ 2020-21ನೇ ಸಾಲಿನ 02/04 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (ಹಾಗೂ ಸಂಜೆ ಪಾಲಿಟೆಕ್ನಿಕ್‌ನ 01/03 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ) ಉಲ್ಲೇಖ(1) ರ ಮಾನದಂಡಗಳ ಅನ್ವಯ ನಿಗದಿಪಡಿಸಲಾದ ಅಂಕಗಳನ್ನು ಮತ್ತು ಫಲಿತಾಂಶವನ್ನು ಸಂಸ್ಥೆಯಲ್ಲಿ ಯಾರಿಗೂ ತಿಳಿಸುವಂತಿಲ್ಲ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸುವಂತಿಲ್ಲ, ನಿಯಮಗಳನ್ನು ಉಲ್ಲಂಘಿಸಿದಲ್ಲಿ ಉಲ್ಲೇಖ(3) ರ ಸರ್ಕಾರದ ಆದೇಶದ ಅನ್ವಯ ನಿಯಮಾನುಸಾರ ಕ್ರಮ ಜರುಗಿಸಲಾಗುವುದು**

ಅಪ್‌ಲೋಡ್ ಮಾಡಲಾದ ಅಂಕಗಳು ಮತ್ತು ಆಂತರಿಕ ಅಂಕಗಳ ಪಟ್ಟಿಯ ಪ್ರತಿ ಹಾಗೂ ಚೆಕ್‌ಲಿಸ್ಟ್ ನಮೂನೆಗಳನ್ನು ಮಂಡಳಿಗೆ ಕಳುಹಿಸಿಕೊಡತಕ್ಕದ್ದು. ಸಂಸ್ಥೆಯ ಮೂಲ ಅಂಕಗಳ /ಮತ್ತು ಆಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿನ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು ಹಾಗೂ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು ಮತ್ತು ಪರಿವೀಕ್ಷಕರುಗಳು ಕೆಳಕಂಡಂತೆ ದೃಢೀಕರಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ಸಂಸ್ಥೆಯ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸುವುದು. ಮುಂದುವರೆದು ಉಲ್ಲೇಖ(2) ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ ನಡೆಸಿದ Blue Book ಗಳನ್ನು ಮೂರು ವರ್ಷ ಕಾಲಾವಧಿಯವರೆಗೆ ಸಂಗ್ರಹಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡತಕ್ಕದ್ದು. COVID-19 Pandemic ಹಿನ್ನೆಲೆಯಲ್ಲಿ ನಿಗದಿಪಡಿಸಲಾದ ಅಂಕಗಳ ವಹಿ ಮತ್ತು ಆಂತರಿಕ ಅಂಕಗಳ ವಹಿಯನ್ನು (I.A Marks Register) ಖಾಯಂ ದಾಖಲೆಯಾಗಿ ಸಂಗ್ರಹಿಸಿಡತಕ್ಕದ್ದೆಂದು ತಿಳಿಸಲಾಗಿದೆ.

<u>**ದೃಢೀಕರಣ:**</u> ಮಾನ್ಯ ಆಯುಕ್ತರ ಅಧಿಕೃತ ಜ್ಞಾಪನ ಸಂಖ್ಯೆ:ಬಿಟಿಇ/04/ಇಸಿಎಸ್(1)/2021 ದಿನಾಂಕ:01.10.2021 ರನ್ವಯ COVID-19 Pandemic ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ನಡೆಸದೆ ಥಿಯರಿ ವಿಷಯಗಳಲ್ಲಿ ನಿಗದಿಪಡಿಸಲಾದ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. ಸದರಿ ಅಂಕಗಳನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ mismatch ತಾಳೆ ಮಾಡಿ ಪರಿಶೀಲಿಸಿ ಸರಿಪಡಿಸಲಾಗಿದೆ. ಮುಂದಿನ ಆಗುಹೋಗುಗಳಿಗೆ, ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಾವೇ ಸಂಪೂರ್ಣ ಹೊಣೆಗಾರರಾಗಿರುತ್ತೇವೆ'.

ಪ್ರಿನ್ಸಿಪಾಲರ ಸಹಿ ಪರಿವೀಕ್ಷಕರ ಸಹಿ ಮತ್ತು ವಿಳಾಸ

<u>**ದೃಢೀಕರಣ:**</u> "ಆಂತರಿಕ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. (  ) ಸಂಖ್ಯೆ ತಿದ್ದುಪಡಿಗಳನ್ನು ಕಿರುಸಹಿಯಿಂದ ದೃಢೀಕರಿಸಿರುತ್ತಾರೆ. ಆಂತರಿಕ ಅಂಕಗಳನ್ನು ಬ್ಲೂ ಬುಕ್ ಮತ್ತು ಕ್ರೋಢೀಕೃತ ಹಾಜರಾತಿ ವಹಿಯೊಂದಿಗೆ ತಾಳೆಮಾಡಿ ಪರಿಶೀಲಿಸಲಾಗಿದೆ. ಮುಂದಿನ ಆಗುಹೋಗುಗಳಿಗೆ, ಆಂತರಿಕ ಅಂಕಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಾವೇ ಸಂಪೂರ್ಣ ಹೊಣೆಗಾರರಾಗಿರುತ್ತೇವೆ'.

ಪ್ರಿನ್ಸಿಪಾಲರ ಸಹಿ ಪರಿವೀಕ್ಷಕರ ಸಹಿ ಮತ್ತು ವಿಳಾಸ

ಮೇಲೆ ತಿಳಿಸಿದಂತೆ ನಿಗಧಿತ ಸಮಯದಲ್ಲಿ ಪರಿವೀಕ್ಷಕರ ಸಮ್ಮುಖದಲ್ಲಿ ಆನ್ ಲೈನ್ (BTELinx) ಮೂಲಕ ಅಂಕಗಳನ್ನು ಅಪ್‌ಲೋಡ್ ಮಾಡದೆ ಫಲಿತಾಂಶ ವಿಳಂಬವಾದರೆ ಹಾಗೂ ಯಾವುದೇ ಲೋಪದೋಷಗಳಿಂದ/ ಅಂಕಗಳ ವ್ಯತ್ಯಾಸದಿಂದ ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ತೊಂದರೆಗಳಾದಲ್ಲಿ ಸಂಬಂಧಿಸಿದ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ (3) ರ ಸರ್ಕಾರಿ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗುವುದು.

Dr. ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ

2. COVID-19 Pandemic ಹಿನ್ನೆಲೆಯಲ್ಲಿ Marks Ledger ಮತ್ತು ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ–
ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ: 1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು

2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ
4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ
5. ಇಎಪಿ ವಿಭಾಗ

**ಚೆಕ್‌ಲಿಸ್ಟ್ ನಮೂನ**

**(ಭರ್ತಿ ಮಾಡಿದ ನಂತರ ಕಾರ್ಯದರ್ಶಿಯವರಿಗೆ ರವಾನಿಸುವುದು)**

| |
|---|
| ತಾಂತ್ರಿಕ ಪರೀಕ್ಷಾ ಮಂಡಳಯಿಂದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು (IA Marks) ಪರಿಶೀಲಿಸಲು ನಿಯೋಜಿಸಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್) |

| ಕ್ರಮ | ಅಂಶ | ಹೌದು | ಇಲ್ಲ |
|---|---|---|---|
| 1. | C-15 ಪಠ್ಯಕ್ರಮಗಳಲ್ಲಿ ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | ☐ | ☐ |
| 2. | C-20 ಪಠ್ಯಕ್ರಮಗಳಲ್ಲಿ ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | ☐ | ☐ |
| 3. | C-20 ಪಠ್ಯಕ್ರಮಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ವಿದ್ಯಾರ್ಥಿ ಚಟುವಟಿಕೆ (Student activity-MCQ/Quiz/ Open Book Test/ Assignments) ಗಳನ್ನು ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ನಡೆಸಲಾಗಿದೆಯೇ? | ☐ | ☐ |
| 4. | C-20 ಪಠ್ಯಕ್ರಮಗಳಲ್ಲಿನ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ಕೌಶಲ್ಯ ಕಿರುಪರೀಕ್ಷೆಗಳನ್ನು (Skill Tests) ನಡೆಸಲಾಗಿದೆಯೇ? | ☐ | ☐ |
| 5. | C-20 ಪಠ್ಯಕ್ರಮಗಳಲ್ಲಿನ ಥಿಯರಿ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು (CIE) ನಿಗದಿಪಡಿಸುವಾಗ ಸರ್ಕಾರಿ ಆದೇಶ/ ಚಾಲ್ತಿಯಲ್ಲಿರುವ ಸುತ್ತೋಲೆಗಳನುಸಾರ ಮೌಲ್ಯಮಾಪನವನ್ನು Rubrics for Skill Test/Practical Test/ Course Assessment & Evaluation Chart/ appropriate Rubrics by respective Course Co-ordinatorsಗಳನುಸಾರ ಮೌಲ್ಯಮಾಪನ ಮಾಡಲಾಗಿದೆಯೇ? | ☐ | ☐ |
| 6. | C-15/ C-20 ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿದಂತೆ ಪ್ರತಿ ಕಿರುಪರೀಕ್ಷೆ ನಡೆಸುವಾಗ ಕ್ರಮವಾಗಿ ಅದರಲ್ಲಿ ನಿಗಧಿಪಡಿಸಿರುವಂತೆ ಪಾಠ ಪ್ರವಚನಗಳನ್ನು ಮುಗಿಸಿರುವರೆ? ಮತ್ತು C-15/ C-20 ಪಠ್ಯಕ್ರಮದ ಪಠ್ಯವಿಷಯಗಳಲ್ಲಿ ಪ್ರತಿ ಕಿರುಪರೀಕ್ಷೆ/ ಚಟುವಟಿಕೆಗಳು/ ಕೌಶಲ್ಯ ಕಿರು ಪರೀಕ್ಷೆಗಳನ್ನು ನಡೆಸಿದ ತರುವಾಯ ನಿಗದಿಪಡಿಸಲಾದ CO's attainments ಸಾಧಿಸಲಾಗಿದೆಯೇ? | ☐ | ☐ |
| 7. | ವಿದ್ಯಾರ್ಥಿಗಳು ಕಿರುಪರೀಕ್ಷೆ ಬರೆಯಲು ಬ್ಲೂ ಬುಕ್ ಇಟ್ಟಿರುವರೆ? | ☐ | ☐ |
| 8. | ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ ಹಾಗೂ ಕ್ರೋಡೀಕೃತ ಹಾಜರಾತಿ ಪುಸ್ತಕ ಪ್ರತಿ ವಿಭಾಗದಲ್ಲಿ ಇರುವುದೇ? | ☐ | ☐ |
| 9. | C-15 ಮತ್ತು C-20 ಪಠ್ಯಕ್ರಮಗಳಲ್ಲಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ಕ್ರೋಡೀಕೃತ ವಹಿಗಳಲ್ಲಿ (Consolidated IA Register) ಭರ್ತಿ ಮಾಡಿ ಎಲ್ಲಾ ಪುಟಗಳಲ್ಲಿ ಸಂಬಂಧಪಟ್ಟ ಉಪನ್ಯಾಸಕರು,ವಿಭಾಗಾಧಿಕಾರಿಗಳು ಮತ್ತು ಪ್ರಾಂಶುಪಾಲರು ಸಹಿ ಮಾಡಿರುವರೇ? | ☐ | ☐ |
| 10. | ಪ್ರತಿ ವಿದ್ಯಾರ್ಥಿಯ ಹಾಜರಾತಿಯನ್ನು ಹಾಜರಾತಿ ಪುಸ್ತಕದಲ್ಲಿ ಭರ್ತಿ ಮಾಡಿರುವರೆ? | ☐ | ☐ |
| 11. | ಪ್ರತಿ ವಿಷಯಗಳಲ್ಲಿ ಕ್ರೋಡೀಕೃತ ಹಾಜರಾತಿಯನ್ನು ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟಿಸಲಾಗಿದೆಯೇ? ಮತ್ತು ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ & ಪೋಷಕರಿಗೆ ಮಾಹಿತಿ ನೀಡಲಾಗಿದೆಯೇ? | ☐ | ☐ |
| 12. | C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ, ಯಾವುದೇ ವಿಷಯದಲ್ಲಿ ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ಹಾಗೂ ಅಂತಹ ವಿದ್ಯಾರ್ಥಿಗಳು ಆ ವಿಷಯದಲ್ಲಿ ಅಕ್ಟೋಬರ್/ನವೆಂಬರ್ 2021ರ ಅಂತಿಮ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂದು ಘೋಷಿಸಲಾಗಿದೆಯೇ?ಮತ್ತು ಅಂತಹ ವಿದ್ಯಾರ್ಥಿಗಳು ಮೇ 2021ರ ಅಂತಿಮ ಪರೀಕ್ಷೆ (SEE) ಯನ್ನುಬರೆಯದಿರುವಬಗ್ಗೆ ಖಾತರಿಪಡಿಸಲಾಗಿದೆಯೇ?<br>ಸೂಚನೆ: Those Candidates who have not obtained requisite minimum pass marks in CIE are not eligible to take up SEE in that course until they get requisite minimum pass marks in the CIE. They may re-register for the CIE in the Make-up examinations. | ☐ | ☐ |
| 13. | C-15 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಥಿಯರಿ ವಿಷಯಗಳು/ ಜೆ.ಒ.ಸಿ ಅಭ್ಯರ್ಥಿಗಳು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್ ಪ್ರವೇಶ ಪಡೆದಿರುವ ಐ.ಟಿ.ಐ ವಿದ್ಯಾರ್ಥಿಗಳು ತೆಗೆದುಕೊಳ್ಳುವ C-15 ಪಠ್ಯಕ್ರಮದ ಥಿಯರಿ ವಿಷಯಗಳಿಗೆ (Bridge Subjects) ಕೂಡ ಅನ್ವಯವಾಗುವಂತೆ ಆಂತರಿಕ ಅಂಕಗಳನ್ನು ನೀಡುವಾಗ ಮೂರು ಕಿರು ಪರೀಕ್ಷೆಗಳ ಅಂಕಗಳನ್ನು ಪರಿಗಣಿಸಲಾಗಿದೆಯೇ? | ☐ | ☐ |
| 14. | C-15 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಗಳ ಆಂತರಿಕ ಅಂಕಗಳನ್ನು ನೀಡುವಾಗ ಪ್ರತಿ 10 ಅಂಕಗಳ ಎರಡೂ ಕಿರು ಪರೀಕ್ಷೆಗಳ ಅಂಕಗಳನ್ನು ಪರಿಗಣಿಸಲಾಗಿದೆಯೇ? | ☐ | ☐ |
| 15. | C-15/C-20 ಪಠ್ಯಕ್ರಮದ ಆಂತರಿಕ ಪರೀಕ್ಷೆಯ (CIE) ಪ್ರಶ್ನೆಪತ್ರಿಕೆಗಳನ್ನು ನಿಗದಿಪಡಿಸಲಾದ "cognitive level"/ CO/PO ಗಳ ಆಧಾರದಲ್ಲಿ ತಯಾರಿಸಲಾಗಿದೆಯೇ? | ☐ | ☐ |
| 16. | C-15/C-20 ಪಠ್ಯಕ್ರಮದ ಪ್ರತಿ ವಿಷಯಗಳಿಗೆ (ಥಿಯರಿ ಮತ್ತು ಪ್ರಾಯೋಗಿಕ) "Course Plan" ಬರೆಯಲಾಗಿದೆಯೇ? ಹಾಗೂ ವಿಭಾಗಾಧಿಕಾರಿಗಳಂದ ದೃಢೀಕರಿಸಲ್ಪಟ್ಟಿದೆಯೇ? | ☐ | ☐ |

17. C-15/C-20 ಪಠ್ಯಕ್ರಮದ ವಿಷಯಗಳಿಗೆ ಆಂತರಿಕ ಅಂಕಗಳಿಗಾಗಿ (ಥಿಯರಿ ಮತ್ತು ಪ್ರಾಯೋಗಿಕ) ವಿದ್ಯಾರ್ಥಿ ಚಟುವಟಿಕೆಗಳನ್ನು (Student activity) ನಡೆಸುವಾಗ Performance indicator (Rubrics) ಗಳನುಸಾರ ಮೌಲ್ಯಮಾಪನಮಾಡಲಾಗಿದೆಯೇ? ಅದಕ್ಕೆ evidence ಒದಗಿಸಲಾಗಿದೆಯೇ? ☐ ☐

18. 2020-21ನೇ ಸಾಲಿನಲ್ಲಿ C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಗರಿಷ್ಠ 50 ಅಂಕಗಳಿಗೆ ಪ್ರತಿಯೊಂದು ವಿದ್ಯಾರ್ಥಿಗೆ ಈ ಕೆಳಕಂಡಂತೆ ಅಂಕಗಳನ್ನು ನಿಗದಿಪಡಿಸಲಾಗಿದೆಯೇ?

ಅ) 50% of Average of Passed Subjects of Previous Semester. ☐ ☐

ಆ) 50% of Average of Continuous Internal Evaluation/IA ☐ ☐

19. 2020-21ನೇ ಸಾಲಿನಲ್ಲಿ C-15 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ 4 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಗರಿಷ್ಠ 100 ಅಂಕಗಳಿಗೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ಕೆಳಗಿನಂತೆ ಅಂಕಗಳನ್ನು ನಿಗದಿಪಡಿಸಲಾಗಿದೆಯೇ?

ಅ) 50% of Average of Passed Subjects of Previous Semester. ☐ ☐

ಆ) 50% of Average of Continuous Internal Evaluation/IA ☐ ☐

20. ಸಂಜೆ ಪಾಲಿಟೆಕ್ನಿಕ್‌ನ 2020-21ನೇ ಸಾಲಿನಲ್ಲಿ C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ಮೊದಲನೆ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಗರಿಷ್ಠ 50 ಅಂಕಗಳಿಗೆ, 100% CIE ಅನ್ನು ಪರಿಗಣಿಸಿ ಅಂಕಗಳನ್ನು ನೀಡಲಾಗಿದೆಯೇ? ☐ ☐

21. ಸಂಜೆ ಪಾಲಿಟೆಕ್ನಿಕ್‌ನ 2020-21ನೇ ಸಾಲಿನಲ್ಲಿ C-15 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ಮೂರನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಗರಿಷ್ಠ 100 ಅಂಕಗಳಿಗೆ, ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ಕೆಳಗಿನಂತೆ ಅಂಕಗಳನ್ನು ನಿಗದಿಪಡಿಸಲಾಗಿದೆಯೇ?

ಅ) 50% of Average of Passed Subjects of Previous Semester. ☐ ☐

ಆ) 50% of Average of Continuous Internal Evaluation ☐ ☐

22. 2020-21 ರ ಸಾಲಿನ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಗಳ ಬ್ರಿಡ್ಜ್ ಪಠ್ಯವಿಷಯಗಳ ಅಂಕಗಳನ್ನು ಆಂತರಿಕ ಅಂಕಗಳ ಆಧಾರದ ಮೇಲೆ ನೀಡಲಾಗಿದೆಯೇ? ☐ ☐

23. ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಗಳ ರೆಕಾರ್ಡ್‌ಗಳ/ಇತರೆ ಶೈಕ್ಷಣಿಕ ದಾಖಲೆಗಳ ಮೌಲ್ಯಮಾಪನವಾಗಿದೆಯೇ? ☐ ☐

24. ಚಾಲ್ತಿಯಲ್ಲಿರುವ ನಿಯಮಗಳನುಸಾರ (ಸರ್ಕಾರಿ ಆದೇಶಗಳಂತೆ) ಅವುಗಳ ಮೌಲ್ಯಮಾಪನವಾಗಿದೆಯೇ? ☐ ☐

25. Midterm Feedback & Course end Survey Feedback ಗಳನ್ನು ಪ್ರತಿ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಲ್ಲಿ C-15/ C-20 ಪಠ್ಯಕ್ರಮದ ವಿದ್ಯಾರ್ಥಿಗಳಿಂದ ಪಡೆಯಲಾಗಿದೆಯೇ? ಮತ್ತು ಪಡೆದ Feedback ಗಳ ವಿಶ್ಲೇಷಣೆ (Analysis) ಮಾಡಲಾಗಿದೆಯೇ? ☐ ☐

26. ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ(ಕ್ರೋಢೀಕೃತ ವಹಿ ಸಹಿತ) ಮತ್ತು ಅಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ? ☐ ☐

27. ಎಲ್ಲಾ ಕೋರ್ಸುಗಳ ಆಂತರಿಕ ಅಂಕಗಳನ್ನು BTELinx ವೆಬ್‌ಪೋರ್ಟಲ್ ಮೂಲಕ ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? ☐ ☐

28. ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಹೆಸರುಗಳನ್ನು ಆಯಾ ಕ್ಯಾಂಡಿಡೇಟ್ ಲಿಸ್ಟ್‌ನಿಂದ ತೆಗೆದು ಹಾಕಲಾಗಿದೆಯೇ? ಮತ್ತು ಸರ್ಕಾರಿ ಖಜಾನೆಗೆ ಪಾವತಿಸಲಾಗಿರುವ ಒಟ್ಟು ಪರೀಕ್ಷಾ ಶುಲ್ಕದ ಮೊತ್ತವು ಸಂಸ್ಥೆಯಲ್ಲಿನ ಕ್ಯಾಂಡಿಡೇಟ್ ಲಿಸ್ಟ್‌ನ ಲೆಡ್ಜರ್‌ನಲ್ಲಿ ನಮೂದಿಸಿರುವಂತೆ ವಿದ್ಯಾರ್ಥಿಗಳು ನಿಯಮಾನುಸಾರ ಪಾವತಿಸಬೇಕಾದ ಮೊತ್ತಕ್ಕೆ ತಾಳೆಯಾಗುತ್ತದೆಯೇ? ☐ ☐

29. ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ BTELinx ವೆಬ್ ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಸಂಸ್ಥೆಯಲ್ಲಿ ಆಂತರಿಕ ಅಂಕಗಳ ವಹಿಯೊಡನೆ ತಾಳೆ ಮಾಡಿ ನಂತರ ಪರಿವೀಕ್ಷಕರು ಮತ್ತು ಪ್ರಾಚಾರ್ಯರು ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ☐ ☐

30. ಪರಿವೀಕ್ಷಕರು C-15 ಮತ್ತು C-20 ಪಠ್ಯಕ್ರಮದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ತಿಳಿಸಿರುವಂತೆ ಧೃಢೀಕರಿಸಿ ಪೂರ್ಣ ವಿಳಾಸ ನಮೂದಿಸಿರುವರೇ? ☐ ☐

31. COVID-19 Pandemic ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ನಡೆಸದೆ ಥಿಯರಿ ವಿಷಯಗಳಲ್ಲಿ ನಿಗದಿಪಡಿಸುವ ಅಂಕಗಳ ವಹಿಯ ಪ್ರತಿ ಪುಟಗಳಲ್ಲಿ ಪರಿವೀಕ್ಷಕರ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ತಿಳಿಸಿರುವಂತೆ ಧೃಢೀಕರಿಸಿ ಪೂರ್ಣ ವಿಳಾಸ ನಮೂದಿಸಿರುವರೇ? ☐ ☐

32. ಪರಿವೀಕ್ಷಕರ ಷರಾ (ಏನಾದರೂ ಇದ್ದಲ್ಲಿ)

ಪ್ರಾಂಶುಪಾಲರ ಸಹಿ

ಪರಿವೀಕ್ಷಕರ ಸಹಿ